ಓ.ಎಸ್.ನಂ: 142/2018   ಪಿಡಬ್ಲ್ಯೂ: 1

ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 29.05.2024

**ಮುಂದುವರೆದ ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ ಪಿ. ಸಿ. ಎಸ್.ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯ ಪ್ಯಾರಾ ನಂಬರ 8 ರಲ್ಲಿ ಬರೆಸಿದ ಹಾಗೆ ಪ್ರತಿವಾದಿಯರು ಹರಕತ ಮಾಡಿದಾಗ ಹಿರಿಯರು ತಿಳಿಸಿರುತ್ತೇವೆ ಎಂದು ಬರೆಯಿಸಿದ್ದು, ಯಾರು ಅಂತಾ ಕೇಳಿದ ಪ್ರಶ್ನೆಗೆ ಯಾರು ಇಲ್ಲ ಅಂತಾ ಉತ್ತರಿಸುತ್ತಾರೆ. ಪ್ರತಿವಾದಿಯರ ವಿರುದ್ಧ ಪೋಲೀಸ ಠಾಣೆಗೆ ಹೋದ ಬಗ್ಗೆ ದೂರು ನೀಡಿದ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. ನಾನು ಯಾವ ತಾರೀಖು, ತಿಂಗಳು ವರ್ಷದಲ್ಲಿ ಠಾಣೆಗೆ ಹೋಗಿರುತ್ತೇನೆ ಎಂದು ನನಗೆ ನೆನಪಿಲ್ಲ, ಆದರೆ ನಾವು ಹೋದಾಗ ದೂರನ್ನು ಸ್ವೀಕರಿಸಬಾರದು ಅಂತಾ ಹೇಳಿದ್ದರಿಂದ ದೂರನ್ನು ಪಡೆದಿರುವುದಿಲ್ಲ. ಪ್ರತಿವಾದಿಯರ ಆಸ್ತಿಯಲ್ಲಿ ಯಾವುದೇ ದಾರಿ ಇಲ್ಲದೇ ಇರುವುದರಿಂದನಮಗೆ ತೊಂದರೆ ಕೊಡುವ ಪ್ರಶ್ನೆಯೇ ಬರುವುದಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ನನ್ನ ಮುಖ್ಯ ವಿಚಾರಣೆ 8 ನೇ ಪ್ಯಾರದಲ್ಲಿ ತಪ್ಪಾಗಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ.

2) ನಮ್ಮ ಜಮೀನಿಗೆ ರಿ. ಸ. ನಂಬರ 74/6 ನೇದ್ದರ ಜಮೀನಿನ ಮೂಲಕ ಬಂದು ಹೋಗುವುದು ಮಾಡುತ್ತೇವೆ ಎಂದರೆ ಸಾಕ್ಷಿಯು ನಾವು ರಿ. ಸ. ನಂಬರ 74 ರಲ್ಲಿ ಓಡಾಡುತ್ತೇವೆ ಎಂದು ಉತ್ತರಿಸುತ್ತಾರೆ. ಪ್ರತಿವಾದಿಯರ ಜಮೀನಿನಲ್ಲಿ ಯಾವುದೇ ದಾರಿ ಇಲ್ಲ ಮತ್ತು ನಾವು ಅದರಲ್ಲಿ ಓಡಾಡುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರ ಜಮೀನು ಒತ್ತುವರಿ ಮಾಡಿದ್ದನ್ನು ಮೋಜಣಿ ಮಾಡಿ ಕಬ್ಜಾಕ್ಕೆ ಪಡೆದಿದ್ದರಿಂದ ದಾರಿ ಇದೆ ಅಂತಾ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. 2018 ರಲ್ಲಿ ನಾವು ಬಿತ್ತಲು ಹೋದಾಗ ಪ್ರತಿವಾದಿಯರು ನಮಗೆ ಹರಕತ್ತ ಮಾಡಿರುತ್ತಾರೆ ಅಂತಾ ಸುಳ್ಳು ಹೇಳುತ್ತೀದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

ಸಹಿ/-
ದಿವಾಣಿ ನ್ಯಾಯಾಧೀಶರು,
ಬ್ಯಾಡಗಿ.